**ಕರ್ನಾಟಕ ಸರ್ಕಾರ**

ಡಿಟಿಇ/ 21/ಮಾಹಕಾ/2021

ಆಯುಕ್ತರವರ ಕಚೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ,
ಬೆಂಗಳೂರು-560001.
ದಿನಾಂಕ: 20-3-2021.

## ಸುತ್ತೋಲೆ

ವಿಷಯ: ಮಾಹಿತಿ ಹಕ್ಕು ಅಧಿನಿಯಮ 2005 ರಡಿ ದಿನಾಂಕ: 1-4-2020 ರಿಂದ 31-3-2021 ರ ವರೆಗಿನ ವಾರ್ಷಿಕ ವರದಿಯನ್ನು ತಯಾರಿಸಿ ಕಳುಹಿಸುವ ಬಗ್ಗೆ.

*****

ಮಾಹಿತಿ ಹಕ್ಕು ಕಾಯ್ದೆ 2005 ರಡಿ ಮಾರ್ಚ್ 2021 ಕ್ಕೆ ಅಂತ್ಯಗೊಂಡಂತೆ , ವಾರ್ಷಿಕ ವರದಿಯನ್ನು ಕ್ರೋಢೀಕರಿಸಿ, ಸರ್ಕಾರಕ್ಕೆ ಸಲ್ಲಿಸುವ ಸಲುವಾಗಿ ತಮ್ಮ ಸಂಸ್ಥೆಗೆ ಸಂಬಂಧಿಸಿದಂತೆ, ಮಾಹಿತಿ ಹಕ್ಕು ಅಧಿನಿಯಮ 2005 ರ ನಿಯಮ 4(1) ಎ ಮತ್ತು 4(1) ಬಿ ಯನ್ನು ಕಾಲೋಚಿತಗೊಳಿಸುವಂತೆ ಹಾಗೂ ದಿನಾಂಕ: 1-4-2020 ರಿಂದ 31-3-2021 ರ ವರೆಗಿನ ವಾರ್ಷಿಕ ವರದಿಯನ್ನು ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿ ದಿನಾಂಕ: 9-4-2021 ರೊಳಗಾಗಿ ಈ ಕಛೇರಿಗೆ ಕಳುಹಿಸಿ ಕೊಡಲು ತಿಳಿಸಲಾಗಿದೆ. ಸಂಸ್ಥೆಯಲ್ಲಿ ಮಾಹಿತಿ ಹಕ್ಕು ಕಾಯ್ದೆಯಡಿ ಯಾವುದೇ ಅರ್ಜಿ ಸ್ವೀಕೃತಗೊಂಡಿಲ್ಲವಾದರೆ Nil Report ಕಳುಹಿಸುವುದು ಕಡ್ಡಾಯವಾಗಿರುತ್ತದೆ. ತಮ್ಮ ಸಂಸ್ಥೆಯ ವೆಬ್ ಸೈಟ್ ನಲ್ಲಿ 4(1) ಎ ಮತ್ತ 4(1) ಬಿ ಮಾಹಿತಿಯನ್ನು ಪ್ರಕಟಿಸಿ ಅನುಸರಣಾ ವರದಿಯನ್ನು ಸಹ ಕಳುಹಿಸಲು ಸೂಚಿಸಿದೆ.

ಆಯಾ ಸಂಸ್ಥೆಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಹಾಗೂ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಈ ವಿಷಯವನ್ನು ಅತಿ ತುರ್ತು ಎಂದು ಪರಿಗಣಿಸಿ ತಮ್ಮ ವೈಯಕ್ತಿಕ ಗಮನ ಹರಿಸಿ ವಿವರಗಳನ್ನು ಕಳುಹಿಸಿಕೊಡಲು ತಿಳಿಸಿದೆ..

**ಜಂಟಿ ನಿರ್ದೇಶಕರು**

20/3/2021

**ಇವರಿಗೆ,**

1.ಪ್ರಾಚಾರ್ಯರು, ಎಲ್ಲಾ ಸರ್ಕಾರಿ/ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು.

2. ಪ್ರಾಚಾರ್ಯರು, ಎಲ್ಲಾ ಸರ್ಕಾರಿ/ ಅನುದಾನಿತ ಪಾಲಿಟೆಕ್ನಿಕ್ ಗಳು.

3. ಪ್ರಾಚಾರ್ಯರು, ಎಲ್ಲಾ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು.

4. ಇ- ಆಡಳಿತ ವಿಭಾಗಕ್ಕೆ- ವೆಬ್ ಸೈಟ್ ನಲ್ಲಿ ಪ್ರಚುರಪಡಿಸಲು.